ಕ್ಷಣದಲ್ಲಿ ಪ್ಲಾಸ್ಟಿಕ್ ಬ್ಯಾಗಿನಿಂದ ಅಧಿಕಾರಿ ಹೊರಕ್ಕೆ ತೆಗೆದುದು ಒಂದು ಪಿಸ್ತೂಲು. ರೋಹಿತ್ ಅವಾಕ್ಕಾದ. ಸಿಡಿಲು ಬಡಿದವನಂತೆ ನಿಷ್ಚೇಷ್ಟಿತನಾದ.

ತನ್ನ ಪಕ್ಕದಲ್ಲಿ ಕೂತು 'ಉಮ್ಮಚಗಿಯಲ್ಲಿ ಏನೂ ಸಿಗೂದಿಲ್ರೀ ಹಾಂ' ಎಂದವನು ತಾನೂ ಶಿವಮೊಗ್ಗಕ್ಕೆ ಎಂದಿದ್ದನಲ್ಲವೆ? ಶಿರಸಿಯಲ್ಲಿ ಇಳಿದ ಆತ ಮತ್ತೆ ಬಸ್ಸನ್ನೇರಲಿಲ್ಲ ಎನ್ನುವುದು ರೋಹಿತ್‌ಗೆ ನೆನಪಾಯಿತು. ಹೊರಡುವುದಕ್ಕೆ ಮುನ್ನ ಪ್ರಯಾಣಿಕರೆಲ್ಲ ಬಂದಿದ್ದಾರೆಂಬುದನ್ನು ಖಚಿತಪಡಿಸಿಕೊಳ್ಳಲು ಬಂದಿದ್ದ ಕಂಡಕ್ಟರ್‌ಗೆ, ಪಕ್ಕದ ಸೀಟಿನಾತ ಬಂದಿಲ್ಲ ಎಂದಿದ್ದ ರೋಹಿತ್. ಆ ಮನುಷ್ಯ ಇಲ್ಲೇ ಇಳಿಯುತ್ತಾರಂತೆ ಎಂದು ಕಂಡಕ್ಟರ್ ಹೇಳಿದ ಬಳಿಕ ಎರಡೂ ಸೀಟು ತನ್ನದೇ ಎಂದು ಖುಷಿ ಪಟ್ಟಿದ್ದ. ಇಷ್ಟು ನೆನಪಾಗುತ್ತಿದ್ದಂತೆ ರೋಹಿತ್ ಅಲರ್ಟ್ ಆದ. ಅವನೇ ಏನಾದರೂ ಧೋಕಾ ಮಾಡಿರಬಹುದೇ ಎಂಬ ಯೋಚನೆಯಲ್ಲಿ ಅಡಕತ್ತರಿಯಲ್ಲಿ ಸಿಕ್ಕುಬಿದ್ದೆ ಎಂದು ಚಡಪಡಿಸಿದ. 'ಈಗ ಹೇಳು...' ಕಾಲಮೇಲೆ ಕಾಲು ಹಾಕಿ ಕುಳಿತಿದ್ದ ಅಧಿಕಾರಿ ರಾತ್ರಿ ಮಾತಾಡಿದ್ದಕ್ಕಿಂತ ಭಿನ್ನ ಗಡಸು ಧ್ವನಿಯಲ್ಲಿ ಕೇಳಲಾರಂಭಿಸಿದ. 'ಯಾರು ನೀನು... ಪಿಸ್ತೂಲನ್ನು ಎಲ್ಲಿ ಸಂಪಾದಿಸಿದೆ, ಎಲ್ಲಿಗೆ ಒಯ್ಯುತ್ತಿದ್ದೆ... ನೀನು ಯಾವೂರಿನವನು, ನಿನ್ನ ಸಂಘಟನೆಯ ಹೆಸರೇನು ಹೇಳು... ಶಿವಮೊಗ್ಗದಲ್ಲಿ ನಿನಗೇನು ಕೆಲಸ, ಪಿತೂರಿಯಲ್ಲಿರುವ ಇತರರ ಹೆಸರು ಹೇಳು...'

ಏನೆಂದು ಉತ್ತರ ಕೊಡುವುದೆಂದು ತೋಚದ ರೋಹಿತ್‌ಗೆ ಮಕಮಕ ನೋಡುವುದರಾಚೆಗೆ ಏನೂ ಹೊಳೆಯಲಿಲ್ಲ. ತನಗೂ ಅದಕ್ಕೂ ಸಂಬಂಧವಿಲ್ಲವೆಂದೂ ಪಕ್ಕದ ಸೀಟಿನಾತ ಮಾಡಿದ ಮೋಸ ಅದೆಂದೂ ಹೇಳುವ ಅವನ ಯತ್ನ ಫಲಿಸಲಿಲ್ಲ. ಕಂತೆ ಪುರಾಣ ಬೇಡ, ಸತ್ಯ ಹೇಳಿದರೆ ಉಳಿವುಂಟು; ಇಲ್ಲವಾದರೆ ನರಕ ನೋಡುತ್ತೀಯೆ ಎಂದ ಅಧಿಕಾರಿ ಇದೇ ಫೈನಲ್ ಎಂಬಂತೆ ನೋಡಿದ. ಅವನ ಕಣ್ಣುಗಳೆರಡೂ ಕೆಂಡ ಉಗುಳುತ್ತಿದ್ದವು.

ಪಕ್ಕದಲ್ಲಿದ್ದ ಜಗ್‌ನಿಂದ ಗಟಗಟ ನೀರು ಕುಡಿದ ರೋಹಿತ್ ಮತ್ತೆ ಶಿರಸಿ ಬಸ್‌ಸ್ಟ್ಯಾಂಡ್‌ನತ್ತ ನೆನಪು ಹೊರಳಿಸಿದ. ಪಕ್ಕದ ಸೀಟಿನಲ್ಲಿದ್ದಾತ ತನ್ನ ನಂತರ ಇಳಿದ ಎಂದು ನೆನಪಿಸಿಕೊಂಡ. ಬಸ್ ನಿಂತಾಕ್ಷಣ ಹಿಂದೆ ಮುಂದೆ ಯೋಚಿಸಲಾಗದ ಹಸಿವಿನಲ್ಲಿ ಕೆಳಕ್ಕೆ ಹಾರಿದ್ದ ರೋಹಿತ್ ತನ್ನ ಬ್ಯಾಕ್‌ಪ್ಯಾಕ್ ನ್ನು ಬಸ್ಸಿನ ಲಗ್ಗೇಜ್ ಇಡುವ ಜಾಗದಲ್ಲಿಟ್ಟು ಬಿಟ್ಟು ಬಂದಿದ್ದ. ಇಷ್ಟಕ್ಕೂ ಅದರಲ್ಲಿ ಇರುವುದಾದರೂ ಏನೆನ್ನುವುದು ಆ ವಿಶ್ವಾಸಕ್ಕೆ ಕಾರಣ. ಈಗ ಆ ವಿಶ್ವಾಸವೇ ಕೈಕೊಟ್ಟಿತ್ತು. ಶಿರಸಿ ಬಸ್‌ಸ್ಟ್ಯಾಂಡ್‌ನಲ್ಲಿ ಶತಪಥ ತಿರುಗುತ್ತ ಯಾರೊಂದಿಗೋ ಫೋನಿನಲ್ಲಿ ಮಾತಾಡುತ್ತಿದ್ದ ಸಹ ಪ್ರಯಾಣಿಕ ಶಿವಮೊಗ್ಗದಲ್ಲಿ ನಡೆದ ಘಟನಾವಳಿಯನ್ನು ತನ್ನವರಿಂದ ತಿಳಿದುಕೊಂಡಿರಬೇಕು, ಮುಂದೆ ಹೋದರೆ ಅಪಾಯ ಎಂದರಿತು ಶಿರಸಿಯಲ್ಲೇ ಕಾಣೆಯಾಗಿರಬೇಕು. ಪಿಸ್ತೂಲು ಜೊತೆಗಿದ್ದರೆ ಒಂದಲ್ಲ ಒಂದು ಬಗೆಯಲ್ಲಿ ಗಂಡಾಂತರ ಎದುರಾಗಬಹುದೆಂದೆಲ್ಲ ಯೋಚಿಸಿ ಅದನ್ನು ತನ್ನ ಬ್ಯಾಗ್‌ನಲ್ಲಿ ತುರುಕಿಟ್ಟು ಹೋಗಿರಬೇಕು ಎಂದು ಸಾದ್ಯಂತ ಯೋಚಿಸಿ ಬಸವಳಿದ ರೋಹಿತ್.

ಸತ್ಯ ತನ್ನ ಕಡೆಗೇ ಇದೆ. ಆದರೆ, ಆ ಸತ್ಯವನ್ನು ಮನವರಿಕೆ ಮಾಡಿಕೊಡುವ ದಾರಿ ಯಾವುದೆಂದು ತಲೆಬಿಸಿ ಮಾಡಿಕೊಂಡರೂ ಪರಿಹಾರ ಹೊಳೆಯಲಿಲ್ಲ. ಎದುರು ಕುಳಿತಿದ್ದ ಅಧಿಕಾರಿ ಎಳ್ಳುಕಾಳಿನಷ್ಟೂ ತಾಳ್ಮೆಗೆಡದೆ ರೋಹಿತ್‌ನ ಉತ್ತರಕ್ಕೆ ಕಾದಿದ್ದ. ಆತ ಪ್ರಶ್ನೆ ಕೇಳುವ ಮೊದಲು ಹಚ್ಚಿದ್ದ ಕಿಂಗ್ ಸೈಜ್ ಸಿಗರೇಟು ಪೂರ್ತಿ ಬೂದಿಯಾಗಿತ್ತು. ಮತ್ತದೇ ಗಡಸು ಧ್ವನಿಯಲ್ಲಿ ಇನ್ನು ಮಾತಾಡಿ ಪ್ರಯೋಜನವಿಲ್ಲ ಎಂಬಂತೆ ಹೇಳು ಇಲ್ಲ ಅನುಭವಿಸು ಎಂದ. ತೆರೆದಿಟ್ಟ ಬಾಗಿಲಿನಿಂದ ತಣ್ಣನೆ ಗಾಳಿ ಬೀಸುತ್ತಿತ್ತು. ಹಕ್ಕಿಗಳ ಕಲರವ ಶುರುವಾಗಿತ್ತು. ಪ್ರತಿ ಬೆಳಗೂ ಹೊಸ ಹುಟ್ಟು ಅನ್ನುತ್ತಾರಲ್ಲ, ಹಾಗೆ ಹೊಸ ಬದುಕಿನ ಸಡಗರ ಸಾಗಿತ್ತು. ತನ್ನ ಭವಿಷ್ಯಕ್ಕೆ ಇನ್ನು ಭವಿಷ್ಯವಿಲ್ಲ ಎಂಬ ತೀರ್ಮಾನಕ್ಕೆ ಬಂದ ರೋಹಿತ್, ರೀಮಾಳ ಮುಖ ನೆನಪಿಸಿಕೊಂಡು ಅಸಹಾಯಕತೆಯಲ್ಲಿ ಕಣ್ಮುಚ್ಚಿ ಕುಳಿತ. ತನಿಖೆ ನಡೆದರೆ ತನ್ನ ವಿರುದ್ಧ ಸಾಕ್ಷ್ಯವೆಲ್ಲಿದೆ ಎಂದು ಸ್ವಯಂ ಸಮಾಧಾನಕ್ಕೆ ಯತ್ನಿಸಿದ. ತನ್ನದೆಂದು ತಾನೇ ಹೇಳಿಕೊಂಡ ಬ್ಯಾಕ್‌ಪ್ಯಾಕ್‌ನಲ್ಲಿ ಇದ್ದ ಪಿಸ್ತೂಲನ್ನು ರೆಡ್‌ಹ್ಯಾಂಡ್ ಆಗಿ ಹಿಡಿದ ಭದ್ರತಾ ಸಿಬ್ಬಂದಿಗೆ ಇನ್ನಾವ ಸಾಕ್ಷ್ಯವೂ ಅಗತ್ಯವಿಲ್ಲ ಎಂದು ಹೊಳೆದಾಕ್ಷಣ ತನ್ನ ಭವಿಷ್ಯದ ಬಾಗಿಲು ಸದ್ಯಕ್ಕೆ ಬಂದ್ ಆದಂತೆನಿಸಿ ಪಾರ್ಶ್ವವಾಯು ಬಡಿದಂತೆ ಕುಳಿತಲ್ಲೇ ಒರಗಿದ.

●